## ಚೀಟಿ ಮಹಾತ್ಮೆ



ನಾನು ನೌಕರಿ ಮಾಡುತ್ತಿದ್ದಾಗ ನಮ್ಮ ಕುಟುಂಬ ಕಂಪನಿಯವರು ನೀಡಿದ್ದ ಮನೆಯಲ್ಲಿ ವಾಸವಿತ್ತು. ಮನೆಯ ಹಿಂದೆ ಸಾಕಷ್ಟು ಜಾಗವಿದ್ದು, ಅಲ್ಲಿ ನನ್ನ ಪತ್ನಿ ಸಾಕಷ್ಟು ತರಕಾರಿ ಬೆಳೆಸಿದ್ದಳು. ಆದರೆ, ನಾವು ಬೆಳೆದ ತರಕಾರಿಯನ್ನು ಯಾರೊ ಕದಿಯುತ್ತಿರುವುದು ನಮ್ಮ ಗಮನಕ್ಕೆ ಬಂತು. ಅದು ಪಕ್ಕದ ಮನೆಯ ಮೇಡಂನ ಕೈವಾಡ ಎನ್ನುವುದೂ ಗೊತ್ತಾಯಿತು. ಆದರೆ, ನಮ್ಮೊಂದಿಗೆ ಅವರು ಸ್ನೇಹದಿಂದ ಇದ್ದುದರಿಂದ ನೇರವಾಗಿ ಕೇಳಲು ಸಾಧ್ಯವಾಗಲಿಲ್ಲ. ತುಂಬಾ ಯೋಚಿಸಿ ಒಂದು ಪ್ರಯೋಗ ಮಾಡಿದೆವು. 'ಇದು ನಿಮ್ಮ ದೌರ್ಬಲ್ಯ ಎಂಬುದು ನಮಗೆ ಗೊತ್ತು. ಆದರೆ, ಇನ್ನೊಬ್ಬರ ಸ್ವತ್ತಿಗೆ ಕೈ ಹಾಕುವುದು ಖಂಡಿತ ಸಜ್ಜನಿಕೆ ಅಲ್ಲ' ಎಂದು ಒಂದು ಚೀಟಿ ಬರೆದು ಗಿಡಕ್ಕೆ ನೇತು ಹಾಕಿದೆವು. ಅಲ್ಲಿಂದ ಮುಂದೆ ನಮ್ಮ ತರಕಾರಿಗೆ ಯಾರೂ ಕೈ ಹಾಕಲಿಲ್ಲ.

**ಸುರೇಶ ಹೆಗಡೆ**

## 'ಬಂಗಾರ ದೇನಾ'

ನಾವು ಗುಜರಾತಿನ ವಡೋದರದಲ್ಲಿದ್ದಾಗ ನಡೆದ ಘಟನೆ. ಊರಿಂದ ಬಂದ ನಮ್ಮ ತಾಯಿ ಮೈ ಮೇಲೆ ಸದಾ ಸ್ವಲ್ಪ ಬಂಗಾರದ ಒಡವೆಗಳನ್ನು ಧರಿಸಿಯೇ ಇರುತ್ತಿದ್ದರು. ಒಂದು ದಿನ ಮುಂಜಾನೆ ನಾನು ವಾಕಿಂಗ್ ಮುಗಿಸಿ ಬಂದೊಡನೆಯೇ ಮನೆಯಲ್ಲಿದ್ದ ಅಮ್ಮ ಬಹಳ ಗಾಬರಿಗೊಂಡಿದ್ದರು. ಏನೆಂದು ವಿಚಾರಿಸಿದಾಗ. 'ಏನಮ್ಮಾ, ನಿಮ್ಮೂರಲ್ಲಿ ಬಾಗಿಲು ಬಡಿದು ಬಂಗಾರ ಕೊಡು ಎನ್ನುತ್ತಾರಲ್ಲಾ, ನನಗಂತೂ ಬಹಳ ಹೆದರಿಕೆ ಆಯಿತು' ಎಂದರು. ವಿಚಾರಿಸಿದಾಗ ಗೊತ್ತಾಯಿತು. ನಮ್ಮ ಕಾಲೋನಿಯಲ್ಲಿ ತಿಂಗಳಿಗೊಮ್ಮೆ ಮೋಡಕಾದವ ಮನೆಮನೆಗೆ ಬಂದು 'ಮೋಡಕಾ ಕೊಡಿ' ಎಂದು ಕೇಳಿ ಸಂಗ್ರಹಿಸಿಕೊಂಡು ಹೋಗುತ್ತಾನೆ. ಆವತ್ತೂ ಅಷ್ಟೇ, ಬಾಗಿಲು ಬಡಿದು, 'ಬಂಗಾರ ದೇನಾ' ಎಂದು ಕೇಳಿದ್ದಾನೆ. ಇವರು ತಮ್ಮ ಮೈಮೇಲಿನ ಬಂಗಾರ ಕೇಳುತ್ತಿದ್ದಾನೆಂದು ತಿಳಿದು ಗಾಬರಿಯಾಗಿದ್ದಾರೆ. ಗುಜರಾತಿ ಭಾಷೆಯಲ್ಲಿ ಬಂಗಾರ ಎಂದರೆ ಮೋಡಕಾ ಎಂದು ಹೇಳಿದಾಗ, ಅವರ ಮುಖದಲ್ಲಿ ಸಮಾಧಾನ ಕಾಣಿಸಿತು.



**ಇಂದಿರಾ ಮೋಟೆಬೆನ್ನೂರ**